

ಒಳಭಾಗದಲ್ಲಿ ಭವ್ಯ ಸ್ಥಂಭಗಳು



ಯುನೆಸ್ಕೋ ಗೌರವಕ್ಕೆ ಪಾತ್ರವಾಗಿರುವ ವಾಸ್ತುಶಿಲ್ಪದ ಸಮೀಪ ದರ್ಶನ

ಆಧಾರದ ಮೇಲೆ ನಿರ್ಮಿಸಲಾಗುತ್ತಿದೆ. 12 ಮುಖ್ಯ ಪಿಲ್ಲರ್‌ಗಳು ಏಸುವಿನ 12 ಕಟ್ಟಾ ಅನುಯಾಯಿಗಳನ್ನು ಪ್ರತಿನಿಧಿಸುತ್ತವೆ. ಪಿಲ್ಲರ್‌ಗಳು ಮೇಲೇರಿದಂತೆಲ್ಲ ವಿನ್ಯಾಸಗಳು ಬದಲಾಗುತ್ತ, ಸೀಲಿಂಗ್‌ನ ಕಡೆಗೆ ಕವಲೊಡೆಯುತ್ತದೆ. ಬಣ್ಣದ ಗಾಜುಗಳನ್ನು ಹೊಂದಿರುವ ಕಿಟಕಿಗಳ ವಿನ್ಯಾಸ ಹಾಗೂ ಸೀಲಿಂಗ್‌ನ ವಿನ್ಯಾಸಗಳು ಅತ್ಯಂತ ಕ್ಲಿಷ್ಟಕರ ಹಾಗೂ ಸುಂದರವಾಗಿವೆ. ಲಿಫ್ಟ್‌ನ ಬಳಕೆಯ ಸೌಲಭ್ಯವಿದ್ದು, ಮೇಲೆ ಸಂಗೀತ ಕಾರ್ಯಕ್ರಮವನ್ನು (ಕ್ಯಾರೊಲ್ಸ್ – ಕ್ರಿಶ್ಚಿಯನ್ನರ ಭಕ್ತಿಗೀತೆಗಳು) ನಡೆಸಬಹುದು.

ಆಂಟೋನಿ ಗಾವುಡಿ ಬದುಕಿದ್ದಾಗ ತನ್ನ ಕೆಲಸಗಾರರ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ತೊಂದರೆ ಆಗದಂತೆ, ಪಕ್ಕದಲ್ಲಿಯೇ ಶಾಲೆಯನ್ನು ಕಟ್ಟಿಸಿದ್ದಾನೆ. ಅದನ್ನು ಈಗ ಕಟ್ಟಡದ ಬಗ್ಗೆ ಮಾಹಿತಿ ನೀಡುವ ಮ್ಯೂಸಿಯಂ ಆಗಿ ಉಪಯೋಗಿಸುತ್ತಿದ್ದಾರೆ. ಯಾವ ಸರ್ಕಾರದ ಸಹಾಯವೂ ಇಲ್ಲದೆ ಕೇವಲ ದಾನಿಗಳು ಹಾಗೂ ಪ್ರವಾಸಿಗರ ಪ್ರವೇಶ ಶುಲ್ಕದ ಹಣದಿಂದಲೇ ಕಟ್ಟಡದ ನಿರ್ಮಾಣವಾಗುತ್ತಿದೆ. 'ಲ ಸಗ್ರಾದ ಫೆಮಿಲಿಯ' ಬೆಸಿಲಿಕವನ್ನು ಯುನೆಸ್ಕೋ ವಿಶ್ವ ಪಾರಂಪರಿಕ ತಾಣಗಳಲ್ಲೊಂದಾಗಿ ಗುರ್ತಿಸಿದೆ.

ಯೂರೋಪಿನ ಅತ್ಯಂತ ಎತ್ತರದ, ಅತಿ ಕ್ಲಿಷ್ಟಕರ ವಿನ್ಯಾಸ, ಅತಿ ಹೆಚ್ಚು ವಾಸ್ತುಶಿಲ್ಪಿಗಳಿಂದ ಅತಿ ಹೆಚ್ಚು ಸಮಯದಲ್ಲಿ ನಿರ್ಮಾಣಗೊಳ್ಳುತ್ತಿರುವ ಬೆಸಿಲಿಕದ ವಿವರಣೆಯನ್ನು ಪ್ರತಿಯೊಬ್ಬರಿಗೂ ಕೊಟ್ಟಿದ್ದ ರೇಡಿಯೊ ಮತ್ತು ಕಿವಿಗೆ ಹಾಕುವ ಹೆಡ್ ಫೋನ್‌ನಿಂದ ಕೇಳಿ ನಿಬ್ಬೆರಗಾಗಿ ನೋಡಿದೆವು. ಫೋಟೊ ತೆಗೆಯಲು ಯಾವುದೇ ಅಭ್ಯಂತರವಿಲ್ಲ. ನೆಲಮಾಳಿಗೆಯಲ್ಲಿ ಶೌಚದ ಅನುಕೂಲ ಮಾಡಲಾಗಿದೆ. ಪ್ರವಾಸಿಗರಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ನೂರ ಮೂವತ್ತೇಳು ವರ್ಷಗಳಿಂದ ಸತತವಾಗಿ ನಿರ್ಮಾಣ ಹಂತದಲ್ಲಿರುವ ಕಟ್ಟಡದ ಕೆಲಸವನ್ನು ಮುಂದುವರಿಸಲಾಗುತ್ತಿದೆ.

ಬಾರ್ಸಿಲೋನದ ಯಾವುದೇ ಸ್ಥಳದಿಂದಲೂ ಈ ಬೆಸಿಲಿಕವನ್ನು ಕಾಣಬಹುದು. ನಿರ್ಮಾಣ ಕೆಲಸ ಪೂರ್ತಿಯಾದ ನಂತರ, ಅಂದರೆ 2026ಲ್ಲಿ ಮತ್ತೊಮ್ಮೆ ಭೇಟಿಕೊಡುವ ಆಸೆಯೊಂದಿಗೆ ಹಿಂದಿರುಗಿದ್ದೇವೆ.



'ಲ ಸಗ್ರಾದ ಫೆಮಿಲಿಯ'ದ ಹೊರನೋಟ



ಬಾರ್ಸಿಲೋನಾದಲ್ಲಿ ಎಲ್ಲಿ ನಿಂತರೂ ಕಣ್ಣಿಗೆ ಬೀಳುವ ಬೆಸಿಲಿಕ